## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1288

ಸದಸ್ಯರ ಹೆಸರು : ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ)

ಉತ್ತರಿಸುವ ದಿನಾಂಕ : 29-12-2022.

ಉತ್ತರಿಸುವವರು : ಮಾನ್ಯ ಮಾನ್ಯ ಮುಖ್ಯಮಂತ್ರಿಯವರು.

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ಗ್ರಾಮ ಪಂಚಾಯತ್‌ಗಳಲ್ಲಿ ಭ್ರಷ್ಟಾಚಾರವನ್ನು ತಡೆಗಟ್ಟಲು ಹಾಗೂ ಪಾರದರ್ಶಕತೆಯನ್ನು ತರಲು ಸರ್ಕಾರ ಕೈಗೊಂಡ ಕ್ರಮಗಳೇನು; | ರಾಜ್ಯದ ಗ್ರಾಮ ಪಂಚಾಯತ್‌ಗಳಲ್ಲಿ ಭ್ರಷ್ಟಾಚಾರವನ್ನು ತಡೆಗಟ್ಟಲು ಹಾಗೂ ಪಾರದರ್ಶಕತೆಯನ್ನು ತರಲು ಸರ್ಕಾರ ಕೈಗೊಂಡ ಕ್ರಮಗಳು ಈ ಕೆಳಕಂಡಂತಿವೆ.<br>1) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 286 ರಂತೆ 3 ಹಂತದ ಪಂಚಾಯತ್ ರಾಜ್ ಸಂಸ್ಥೆಗಳ ಸದಸ್ಯರು ಮತ್ತು ಅಧಿಕಾರಿಗಳು ಹಾಗೂ ನೌಕರರನ್ನು ಭಾರತ ದಂಡ ಸಂಹಿತೆಯ 21ನೇ ಪ್ರಕರಣ ಮತ್ತು ಭ್ರಷ್ಟಾಚಾರ ನಿವಾರಣಾ ಅಧಿನಿಯಮ, 1988 ರ ಅರ್ಥ ವ್ಯಾಪ್ತಿಯಲ್ಲಿ ಲೋಕ ನೌಕರರೆಂದು ಪರಿಗಣಿಸಲಾಗಿದೆ.<br>2) ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ನಾಗರೀಕರಿಗೆ ನೀಡುವ ಸೇವೆಗಳನ್ನು ಸಕಾಲ ವ್ಯಾಪ್ತಿಗೆ ತರಲಾಗಿದೆ.<br>3) ಗ್ರಾಮ ಪಂಚಾಯತಿಯಲ್ಲಿ ಗ್ರಾಮ ಸಭೆ ನಡೆಸುವ ಬಗ್ಗೆ ವಿಡಿಯೋ ಚಿತ್ರೀಕರಣ ಮಾಡಲು ಅವಕಾಶ ಕಲ್ಪಿಸಲಾಗಿದೆ.<br>4) ಗ್ರಾಮ ಪಂಚಾಯತಿ ಕಾರ್ಯ ಕಲಾಪಗಳನ್ನು ಪ್ರಸಾರ ಮಾಡಬೇಕೆಂದು ಪಂಚಾಯತಿ ಅಭಿಪ್ರಾಯಪಟ್ಟರೆ ಪ್ರತಿಯೊಂದು ಸಭೆಯ ಕಾರ್ಯಕಲಾಪಗಳನ್ನು ಪ್ರಸಾರ ಮಾಡಲು ಅವಕಾಶ ಕಲ್ಪಿಸಲಾಗಿದೆ. |
| (ಆ) | ಗ್ರಾಮ ಪಂಚಾಯತಿಗಳಲ್ಲಿ ನೀಡುವ ವಿವಿಧ ಸೇವೆಗಳು ಹಾಗೂ ನಿಗಧಿಪಡಿಸಿದ ಶುಲ್ಕದ ವಿವರಗಳೇನು; (ಮಾಹಿತಿ ನೀಡುವುದು) | ಗ್ರಾಮ ಪಂಚಾಯತಿಗಳಲ್ಲಿ ನೀಡುವ ವಿವಿಧ ಸೇವೆಗಳು ಹಾಗೂ ನಿಗಧಿಪಡಿಸಿದ ಶುಲ್ಕದ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| (ಇ) | ವಿವಿಧ ಸೇವೆಗಳು ಹಾಗೂ ನಿಗಧಿಪಡಿಸಿರುವ ಶುಲ್ಕದ ಬಗ್ಗೆ ಸಾರ್ವಜನಿಕರಿಗೆ ತಿಳಿಯಲು ಗ್ರಾಮ ಪಂಚಾಯತ್‌ನ ಸೂಚನಾ ಫಲಕಗಳಲ್ಲಿ ಅಳವಡಿಸುವ ಕುರಿತು ಸರ್ಕಾರ ಕ್ರಮ ಕೈಗೊಳ್ಳಲಿದೆಯೇ; (ವಿವರ ನೀಡುವುದು) | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ವಿವಿಧ ಸೇವೆಗಳು ಹಾಗೂ ನಿಗಧಿಪಡಿಸಿರುವ ಶುಲ್ಕದ ಬಗ್ಗೆ ಸಾರ್ವಜನಿಕರಿಗೆ ತಿಳಿಯಲು ಪ್ರಮಾಣಿತ ಸೂಚನಾ ಫಲಕದ ನಮೂನೆಯನ್ನು ವಿನ್ಯಾಸಗೊಳಿಸಿ, ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಪ್ರಮಾಣಿತ ಸೂಚನಾ ಫಲಕ ಅಳವಡಿಸಲು ನಿರ್ದೇಶನ ನೀಡಲಾಗಿದೆ. |
| (ಈ) | ಪ್ರಸ್ತುತ 'ಪಂಚಮಿತ್ರ' ವೆಬ್‌ಸೈಟ್‌ನ್ನು ಸ್ಥಗಿತಗೊಳಿಸಲು ಕಾರಣವೇನು; ಹಾಗೂ ಪಂಚಮಿತ್ರದಲ್ಲಿ ಯಾವುದೇ ಅನುದಾನ, ಲೆಕ್ಕಪತ್ರ, ಟೆಂಡರ್ ಸೇರಿ ಇನ್ನಿತರೆ ಮಾಹಿತಿಗಳನ್ನು ಅಪ್‌ಲೋಡ್ ಮಾಡುತ್ತಿಲ್ಲದಿರುವುದು ಸರ್ಕಾರದ | ಎನ್.ಐ.ಸಿ ಯಿಂದ ಅಭಿವೃದ್ಧಿಪಡಿಸಲಾಗಿದ್ದ ಪಂಚತಂತ್ರ ತಂತ್ರಾಂಶವನ್ನು ಸ್ಥಗಿತಗೊಳಿಸಿ, ಪಂಚತಂತ್ರ 2.0 ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸಲಾಗುತ್ತಿದೆ. "ಪಂಚಮಿತ್ರ" ತಂತ್ರಾಂಶವು ಪಂಚತಂತ್ರ ತಂತ್ರಾಂಶದೊಂದಿಗೆ ಲಿಂಕ್ ಇರುವುದರಿಂದ "ಪಂಚಮಿತ್ರ" ತಂತ್ರಾಂಶವನ್ನು ಸಹ ಸ್ಥಗಿತಗೊಳಿಸಲಾಗಿದೆ. |

| | | |
|---|---|---|
| | ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಕ್ರಮ ಕೈಗೊಳ್ಳಲು ಸರ್ಕಾರ ಕೈಗೊಂಡ ಕ್ರಮವೇನು: ಯಾವ ಕಾಲಮಿತಿಯಲ್ಲಿ ಈ ಪಂಚಮಿತ್ರ ವೆಬ್‌ಸೈಟ್‌ನ್ನು ಸರಿದೂಗಿಸಲಾಗುವುದು; | ಪಂಚಮಿತ್ರ" ತಂತ್ರಾಂಶದಲ್ಲಿದ್ದ ಎಲ್ಲಾ features ಗಳನ್ನು ಪಂಚತಂತ್ರ 2.0 ತಂತ್ರಾಂಶದಲ್ಲಿ ಮುಂದಿನ ಒಂದು ತಿಂಗಳ ಒಳಗೆ ನೀಡಲಾಗುವುದು. |
| ಉ | ಗ್ರಾಮ ಪಂಚಾಯತ್ಗಳಲ್ಲಿ ಸಿಬ್ಬಂದಿಗಳ ಹಾಜರಾತಿಗಾಗಿ ಬಯೋಮೇಟ್ರಿಕ್ನ್ನು ಕಡ್ಡಾಯಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; ಈ ಬಯೋಮೇಟ್ರಿಕ್ ನಡಿ ಯಾವ ಯಾವ ಅಧಿಕಾರಿ ಹಾಗೂ ಸಿಬ್ಬಂದಿಗಳ ಹಾಜರಾತಿಯನ್ನು ಕಡ್ಡಾಯಗೊಳಿಸಲಾಗುತ್ತದೆ? (ಈ ಬಗ್ಗೆ ಮಾಹಿತಿಯನ್ನು ನೀಡುವುದು) | ಗ್ರಾಮ ಪಂಚಾಯತ್ಗಳಲ್ಲಿ ಸಿಬ್ಬಂದಿಗಳ ಹಾಜರಾತಿಗಾಗಿ ಬಯೋಮೆಟ್ರಿಕ್ ಕಡ್ಡಾಯಗೊಳಿಸಿ ಪಂಚತಂತ್ರ 2.0 ತಂತ್ರಾಂಶದಲ್ಲಿ ಅವಕಾಶ ನೀಡಲಾಗಿದೆ.<br><br>ಗ್ರಾಮ ಪಂಚಾಯತಿಯ ಸರ್ಕಾರಿ ನೌಕರರಾದ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಹಾಗೂ ಗ್ರಾಮ ಪಂಚಾಯತಿಯ ಸಿಬ್ಬಂದಿಗಳಿಗೆ ಇ–ಹಾಜರಾತಿಯನ್ನು ಕಡ್ಡಾಯಗೊಳಿಸಲಾಗಿದೆ. |

ಸಂಖ್ಯೆ: ಗ್ರಾಅಪ 397 ಗ್ರಾಪಂಅ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ - 1288ಕ್ಕೆ ಅನುಬಂಧ

## ಅನುಬಂಧ

| # | Service | Service Fee |
|---|---|---|
| 1 | Building Construction License | As per Panchayat Bye Law |
| 2 | New Water Supply Connection | As per Panchayat Bye Law |
| 3 | Disconnection of Water Supply | Zero |
| 4 | Maintenance of Drinking Water | Zero |
| 5 | Maintenance of Street Light | Zero |
| 6 | Maintenance of Village sanitation | Zero |
| 7 | Trade License | As per Panchayat Bye Law |
| 8 | Form 9/11A | As per Panchayat Bye Law |
| 9 | Form 11B | As per Panchayat Bye Law |
| 10 | Occupancy Certificate | Zero |
| 11 | Road Cutting Permission | As per Panchayat Bye Law |
| 12 | Permission for Establishment of Industrial/ Agriculture-Based Production Unit | |
| 13 | No Objection Certificate | As per Panchayat Bye Law |
| 14 | ISSUE OF JOB CARD TO UNSKILLED LABOURES UNDER MGNREGS | Zero |
| 15 | PROVIDING EMPLOYMENT TO UNSKILLED LABOURS (MGNREGS) | Zero |
| 16 | Permission/Regularization Of Permission For New/Existing Telecommunication Infrastructure Tower | 10,000/- |
| 17 | Permission/Regularization Of Permission For New/Existing Overground Cable Infrastructure/Underground Cable Infrastructure | Rs.1000/- per KM |